ನಾಯಿಗಳಿಗೆ ಹುಚ್ಚು ಹಿಡಿಯದಂತೆ ಲಸಿಕೆ.

1483(2108)

ಶ್ರೀ ಅಪ್ಪಚ್ಚು ರಂಜನ್ ಎಂ.ಸಿ.(ಸೋಮವಾರಪೇಟೆ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಯಿಗಳಿಗೆ ಹುಚ್ಚು ಹಿಡಿಯದಂತೆ ಮುಂಜಾಗ್ರತೆಯಾಗಿ ಕೊಡುವ ಲಸಿಕೆಗಳನ್ನು ಉಚಿತವಾಗಿ ಸರಬರಾಜು ಮಾಡಲು ವ್ಯವಸ್ಥೆ ಇದೆಯೇ? ಇದ್ದಲ್ಲಿ ಹಣ ಪಡೆದುಕೊಂಡು ಲಸಿಕೆ ವಿತರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ನೀಡುವುದು);

ಆ) ಕೊಡಗು ಜಿಲ್ಲೆಯ ಪಶುವೈದ್ಯ ಇಲಾಖೆಗೆ ವಿತರಿಸಲಾಗುವ ಪೀಠೋಪಕರಣದ ಮೊತ್ತವೆಷ್ಟು?

ಇ) ಪಶುಚಿಕಿತ್ಸಾ ಕೇಂದ್ರಗಳಲ್ಲಿ ಪೀಠೋಪಕರಣದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಏನು ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು)?

ಶ್ರೀ ಎ.ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಇಲ್ಲ, ಅನ್ವಯಿಸುವುದಿಲ್ಲ

ಆ) 2000-01ನೇ ಸಾಲಿನಲ್ಲಿ ಪೀಠೋಪಕರಣಗಳನ್ನು ವಿತರಿಸಿಲ್ಲ.

ಇ) ಬಂದಿದೆ. ಆದಾಗ್ಯೂ, ಕೊಡಗು ಜಿಲ್ಲೆಯ ಎಲ್ಲಾ ಪಶುವೈದ್ಯ ಸಂಸ್ಥೆಗಳಲ್ಲಿಯೂ ಕನಿಷ್ಟ ಸವಲತ್ತುಗಳಿರುತ್ತವೆ.

ಧಾರವಾಡ ನಗರ ಪ್ರದೇಶದ ಪರಿಸರ ಹಾನಿ

1484(2104)

ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡದ ಹಿರೇಕೇರಿಯ ಎತ್ತರದ (ಕ್ಯಾಚ್‌ಮೆಂಟ್) ಸ್ಥಳದಲ್ಲಿ ಎಲ್ಲಾ ಕಸಕಡ್ಡಿ ಕೊಳಕಿನಿಂದ (ಗಾರ್ಬೇಜ್) ಕೆರೆಯ ನೀರು ಕೊಳಚೆಗೊಂಡು ನಗರ